ಅಂಶವನ್ನು ಈಗಿನ ಸಿ ಎಂಡಿ ಯವರು ಹೋಗಿ ಬಂದಿದ್ದಾರೆ. ಅವರ ಖರ್ಚಿನಲ್ಲಿ ವಿದೇಶಕ್ಕೆಲ್ಲಾ ಹೋಗಿ ಬಂದಿದ್ದಾರೆ.

ಅಧ್ಯಕ್ಷರು:- ನಾನು ತಮಗೆ ಏನು ಹೇಳುತ್ತೇನೆ, I will take up this matter for discussion under rule 69 - for a detailed discussion on Monday or Tuesdy

ಇಮ್ಮಿಡಿಯೆಟ್ ಆಗಿ ಆಗಬೇಕಾಗಿರುವುದು ನೆಗೊಷಿಯೇಷನ್ ಏನು ಆಗಿದೆ ಅದು ಫೈನಲೈಸ್ ಆಗಬಾರದು. ಅಷ್ಟೇ ಅಲ್ಲವೇ?

ಶ್ರೀ ಕೆ. ಎಸ್. ಈಶ್ವರಪ್ಪ :- ಸಧ್ಯಕ್ಕೆ ಅದನ್ನು ನಿಲ್ಲಿಸಿರಿ.

ಅಧ್ಯಕ್ಷರು:- ನಾನು ಏಕೆ ಇಷ್ಟು ಉತ್ಸಕತೆ ತೋರಿಸುತ್ತಿದ್ದೇನೆಂದರೆ I have the courage to say that we have one of the most honest positions. Mr. Mohidden and he will not hold back anything.,

ಆ ಕಾರಣದಿಂದ ನಾನು ಹೇಳುತ್ತಿದ್ದೇನೆ. Let the Hon. Minister give his reply.

ಅವರು ಇಷ್ಟೇ ಕೇಳುತ್ತಾರೆ. ಆ ನೆಗೋಷಿಯೇಷನ್ಸ್ ಏನು ಫೈನಲೈಸ್ ಮಾಡಿ ಇದನ್ನು ಇಮ್ಮಿಡಿಯೇಟ್ ಆಗಿ ವ್ಯಾಲಿಡೇಟ್ ಮಾಡುವುದಾದರೆ ಅದನ್ನು ತಡೆಯಿರಿ. ಸೋಮವಾರದ ನಂತರ ಡಿಟೈಲ್ಡ್ ಡಿಸ್ಕಷನ್‌ಗೆ ತೆಗೆದುಕೊಳ್ಳೋಣ. Your problem is solved.

SRI. B.A. Mohideen :- Meantime let them take it up under Rule 69, I will be able to.. give them the correct picture

Mr. Speaker:- In between please see that the company is instructed to not to go ahead with it

ಶ್ರೀ ಕೆ. ಎಸ್. ಈಶ್ವರಪ್ಪ :- ಮಾನ್ಯ ಅಧ್ಯಕ್ಷರೇ, ಸೋಮವಾರದ ದಿವಸ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:- ನಾನು ಮಾಡುತ್ತೇನೆ ಆ ಕೆಲಸವನ್ನು.

(ಬಿ) <u>ಕೇಂದ್ರ ಮಂತ್ರಿ ಮಂಡಲದಲ್ಲಿ ಕರ್ನಾಟಕಕ್ಕೆ ಪ್ರಾತಿನಿಧ್ಯ</u>

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :- ಮಾನ್ಯ ಅಧ್ಯಕ್ಷರೇ, ಕೇಂದ್ರದಲ್ಲಿ ವಾಜಪೇಯಿಯವರ ಸರ್ಕಾರ ಅಧಿಕಾರಕ್ಕೆ ಬಂದಿದೆ. ನಾನು ಸಂತೋಷ ಪಟ್ಟಿದ್ದೇವೆ. ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಕರ್ನಾಟಕಕ್ಕೆ ಬರಬೇಕಾದ ಪ್ರಾತಿನಿಧ್ಯ ಬಹಳ ಕಡಿಮೆಯಾಗಿದೆ. ಈಗ ತಮಿಳುನಾಡಿಗೆ 7 ಕೊಟ್ಟಿದ್ದಾರೆ. ಉತ್ತರಪ್ರದೇಶಕ್ಕೆ 7 ಕೊಟ್ಟಿದ್ದಾರೆ. ಈ ಸದನದಲ್ಲಿ ನಾವು ಕೇಳಬೇಕು. ನಮ್ಮ ರಾಜ್ಯದ ಪರವಾಗಿ ಅವರು ಯಾವುದೇ ಪಕ್ಷದವರು ಇರಲಿ, ನಮಗೆ ಬರಬೇಕಾದ ಹಕ್ಕು ಇದು. ಇದರಲ್ಲೇನೂ ಕೃಪೆ ಏನಲ್ಲ. ಯಾರ ಕೃಪೆ ಅಥವಾ ಭಿಕ್ಷೆ ಏನಲ್ಲ. ಈ ರಾಜ್ಯಕ್ಕೆ ತಮಿಳುನಾಡಿನಲ್ಲಿ ಈಗ 7 ಕೊಟ್ಟಿದ್ದಾರೆ ಎಂದರೆ ನಾನು ಮುಂದೆ ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ ತಮಿಳುನಾಡಿನ

ಪ್ರಭುತ್ವವನ್ನು ಕೇಂದ್ರದ ಮೆಲೆ ಹೇರುತ್ತಾರೆ. ನಾಳೆ ಅಂತಿಮವಾಗಿ ನಮ್ಮ ಅನೇಕ ವಿಚಾರಗಳು ತಮಿಳುನಾಡಿಗೂ, ನಮಗೂ ಅನೇಕ ವಿಚಾರಗಳು ಬರಬಹುದು. ಇವೆಲ್ಲಾ ಬರುತ್ತವೆ.

ಅಧ್ಯಕ್ಷರು:- ಇದು ವ್ಯಾಪ್ತಿಗೇ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ:- 7 ಜನ ಮಂತ್ರಿಗಳಲ್ಲಿ ಉತ್ತರ ಪ್ರದೇಶಕ್ಕೆ 7 ಜನ.

ಶ್ರೀ ಸಿ. ಭೈರೇಗೌಡ:- ಕೇಂದ್ರ ಸರ್ಕಾರದ ಮಂತ್ರಿ ಮಂಡಲದರಚನೆಯ ಬಗ್ಗೆ ನಾವು ಯಾವ ನಿಯಮಾವಳಿ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ?

ಅಧ್ಯಕ್ಷರು:- ನಾನೇ ಉತ್ತರ ಹೇಳಿಬಿಡುತ್ತೇನೆ. ಸರ್ಕಾರ ಹೇಳಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಕರೆಕ್ಟ್. ನಾನು ಒಪ್ಪುತ್ತೇನೆ. ಚರ್ಚೆ ಮಾಡಬೇಕು ಎಂತಲ್ಲ. ನಾನೊಬ್ಬ ಈ ರಾಜ್ಯದ...

ಶ್ರೀ ಎಸ್. ಸುರೇಶ್ ಕುಮಾರ್:- ಮಾನ್ಯ ಸಭಾಧ್ಯಕ್ಷರೇ, ಈ ಸಭೆಯಲ್ಲಿ ತೀರ್ಮಾನ ತೆಗೆದುಕೊಂಡು ಅಲ್ಲಿ ಬದಲಾವಣೆ ಮಾಡಿಸುವುದಕ್ಕಾಗುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್:- ಇಲ್ಲ. ಈ ಸಭೆ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವ ಪ್ರಶ್ನೆಯಲ್ಲ ನಾನು ಮಾತನಾಡುವುದು. ಈ ವಿಷಯ ಈ ರಾಜ್ಯಕ್ಕೆ ಸಂಬಂಧಪಟ್ಟಂಥ ಪ್ರಾಮುಖ್ಯವಾದದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ಇನ್ನು ಹೆಚ್ಚಿನ ಪ್ರಾತಿನಿಧ್ಯ ಸಿಗುತ್ತಿತ್ತು ನಂಜೇಗೌಡರಿಗೆ ಹಾಸನದಿಂದ ಕಂಟೆಸ್ಟ್ ಮಾಡಿ ಎಂದರೆ ನಾನು ಮಾಡುವುದಿಲ್ಲ ಎಂದು ಹೇಳಿದರು. ಬಹುಶ: ಅವರು ಮಾಡಿದ್ದರೆ ಇವತ್ತು ಕ್ಯಾಬಿನೆಟ್ ಮಂತ್ರಿಯಾಗಿರುತ್ತಿದ್ದರು. ಅವರು ಒಪ್ಪಲಿಲ್ಲ. ಅದಕ್ಕಾಗಿ ಈ ಪ್ರಶ್ನೆ ಬಂದಿದ್ದು. ಅದಕ್ಕೆ ನೀವು ಯಾರು ನಿಲ್ಲಬೇಕೋ ಅವರು ನಿಲ್ಲುವುದಿಲ್ಲ. ಬೇರೆಯವರಿಗೆ ನೀವು ಕೊಡಿ ಎಂದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ :- ಇದನ್ನು ಹಾಸ್ಯವಾಗಿ ತೆಗೆದುಕೊಳ್ಳುವುದು ಅಲ್ಲ. ನಮಗೆ ಬಹಳ ಅನ್ಯಾಯವಾಗಿದೆ. ಕರ್ನಾಟಕಕ್ಕೆ ನಿರಂತರವಾಗಿ ಅನ್ಯಾಯ. ಯಾವುದೇ ಸರ್ಕಾರ ಬಂದರೂ ಅನ್ಯಾಯ.

ಶ್ರೀ ಕೆ. ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ವಾಟಾಳ್ ನಾಗರಾಜ್ ರವರು ಪ್ರಸ್ತಾಪ ಮಾಡುತ್ತಿರುವುದು ತುಂಬಾ ಸರಿ ಇದೆ. ಇಡೀ ಹೊಸ ಪ್ರಧಾನ ಮಂತ್ರಿಯವರಿಗೆ ಅಭಿನಂದನೆಗಳನ್ನು ಸಲ್ಲಿಸಿ ಇಡೀ ಸದನದಿಂದ ಒಂದು ಒತ್ತಾಯ ಮಾಡೋಣ. ನಮ್ಮ ರಾಜ್ಯಕ್ಕೆ ಏನು ಹೆಚ್ಚಿನ ಪ್ರಾತಿನಿಧ್ಯ ಸಿಗಬೇಕು ಎನ್ನುವಂಥ ಅಂಶ ಇದೆ. ಅದನ್ನು ಕೊಡಬೇಕು ಎನ್ನುವಂಥ ಒತ್ತಾಯವನ್ನು ಏಂಡಿತಾ ಮಾಡಿದರೆ ನಮ್ಮ ರಾಜ್ಯಕ್ಕೆ ನ್ಯಾಯ ದೊರಕುತ್ತದೆ. ಅವರು ಹೇಳುತ್ತಿರುವುದು ಸರಿ ಇದೆ. ಅವರ ನಿರ್ಣಯವನ್ನು ನಾನು ಅನುಮೋದನೆ ಮಾಡುತ್ತೇನೆ.

ಅಧ್ಯಕ್ಷರು:- ಹೊಸ ಸಂಪ್ರದಾಯ ಹಾಕಲಿಕ್ಕೆ, ವ್ಯಾಪ್ತಿ ಮೀರಿ ನಡೆಯಲಿಕ್ಕೆ ನಾನು ಇಲ್ಲಿ ಅವಕಾಶ ಮಾಡಿಕೊಡುವುದಿಲ್ಲ. ವಾಟಾಳರು ಸದಾಕಾಲ ಈ ರಾಜ್ಯದ ಹಿತ, ರಾಜ್ಯದ ಜನತೆಯ ಹಿತ, ಇದರಲ್ಲಿ ಅವರಲ್ಲಿ ಎದ್ದು ಮಾತನಾಡುವಂಥದ್ದು 1962 ರಿಂದ ಪದ್ಧತಿ ಮತ್ತು ಅವರ ಅಭ್ಯಾಸ. ಅದೊಂದು

ಸಿದ್ಧಾಂತ ಮಾಡಿ ಕೊಂಡಿದ್ದಾರೆ. ರಾಜ್ಯದ ಹಿತದೃಷ್ಟಿಯಿಂದ ಅವರುಹೇಳಬೇಕಾದದ್ದು ಹೇಳಿದ್ದಾರೆ. ಇದು ಸದನದ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೇ, ತಮಿಳುನಾಡಿನಲ್ಲಿ 7 ಜನರಿಗೆ ಕೊಟ್ಟಿದ್ದಾರೆ. ನಮ್ಮಲ್ಲಿ ಕೇವಲ 3 ಜನರಿಗೆ ಕೊಟ್ಟಿದ್ದಾರೆ. ಇವತ್ತು ಕರ್ನಾಟಕ, ತಮಿಳುನಾಡಿನಲ್ಲಿ ಏನು ಪರಿಸ್ಥಿತಿ ಇದೆ ಗೊತ್ತು. ನಮ್ಮಲ್ಲೂ 7 ಜನ ಇದ್ದರೆ ಸರಿಸಮಾನವಾಗಿ ಹೋರಾಟ ಮಾಡುವುದಕ್ಕಾಗುತ್ತದೆ ಎಂದು ಹೇಳುವುದರಲ್ಲಿ ಅರ್ಥ ಇದೆ. ಇನ್ನು ಮುಂದೆ ಮಂತ್ರಿ ಮಂಡಲವನ್ನು ವಿಸ್ತರಣೆ ಮಾಡುವವರು ಇದ್ದಾರೆ. ಸನ್ಮಾನ್ಯ ವಾಜಪೇಯಿಯವರು ಇದನ್ನು ಗಮನಿಸಿ. ನಾವೆಲ್ಲರೂ ಅಭಿನಂದನೆ ಸಲ್ಲಿಸೋಣ. ಇನ್ನು ಹೆಚ್ಚು ಪ್ರಾತಿನಿಧ್ಯ ಕೊಡಬೇಕು ಎಂದು ಕೇಳೋಣ. ಕೇಳುವುದರಲ್ಲಿ ತಪ್ಪೇನು ಇಲ್ಲ.

Mr. Speaker:- It is the exclusive prerogative of the Prime Minister of this country to expand or not to expand, tohave any number of Ministers he likes in his cabinet. It is beyond the purview of this house, I am sorry, I will not venture into such things.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ವಾಟಾಳ್‌ರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನಮ್ಮೆಲ್ಲರದೂ ಸಮ್ಮತಿ ಇದೆ. ದಯಮಾಡಿ ಕೇಂದ್ರ ಸರ್ಕಾರದಲ್ಲಿ ಒಳ್ಳೆಯಪಾಲು ಸಿಗಬೇಕು ಎನ್ನುವುದರಲ್ಲಿ ಯಾರದೂ ಭಿನ್ನಾಭಿಪ್ರಾಯಗಳಿಲ್ಲ.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ವಾಟಾಳ್‌ರು ಈ ಪ್ರಶ್ನೆ ಎತ್ತಿದ್ದಾರೆ. ಮಾನ್ಯ ಸಭಾಧ್ಯಕ್ಷರು ಈ ಸದನ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ವಾಟಾಳ್ ನಾಗರಾಜ್‌ರವರ ನೇತೃತ್ವದಲ್ಲಿ ಎಲ್ಲಾ ಬಿಜೆಪಿ ಮತ್ತು ಲೋಕಶಕ್ತಿಯಲ್ಲಿರುವ ಜನರು ವಾಜಪೇಯಿಯವರನ್ನು ಭೇಟಿಮಾಡಲಿಕ್ಕೆ ಹೋದರೆ ಬಹಳ ಒಳ್ಳೆಯದು.

ಶ್ರೀ ಅರಗ ಜ್ಞಾನೇಂದ್ರ:- ಅದರಲ್ಲಿ ಪಟೇಲರು, ನಾಣಯ್ಯನವರು ಇದ್ದರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್:- ನಮಗೆ ಪ್ರಾತಿನಿಧ್ಯ ಜಾಸ್ತಿ ಕೊಟ್ಟಿಲ್ಲ. ತಮಿಳುನಾಡಿಗೆ ಕೊಟ್ಟಿರುವುದು ಸರಿಯಲ್ಲ. ನಮಗೆ ಕೊಡಬೇಕು ಎಂದು ಹೇಳಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎಸ್. ಈಶ್ವರಪ್ಪ :- ಇದು ಸಭಾತ್ಯಾಗ ಮಾಡುವ ಒಂದು ನಾಟಕ. ಇದು ಪ್ರಚಾರಕ್ಕೆ ತೆಗೆದುಕೊಂಡಂಥ ಪ್ರಯತ್ನ ಇವರಿಗೆ ಕಳಕಳಿ ಇಲ್ಲ. ರಾಜ್ಯಕ್ಕೆ ಹೆಚ್ಚು ಕೊಡ ಬೇಕು ಎನ್ನುವುದಲ್ಲ. ಪ್ರಚಾರ ಮಾಡುವ ಒಂದು ಕುತಂತ್ರ. ಈ ರೀತಿ ಪ್ರಚಾರ ಮಾಡುವುದು ಸರಿಯಲ್ಲ. ಇದರೆ ಬಗ್ಗೆ ನಿರ್ಣಯ ಮಾಡಬೇಕಿತ್ತು. ಪ್ರಚಾರ ಮಾಡಿಕೊಂಡು ಸಭಾತ್ಯಾಗ ಮಾಡುವಂಥ ಒಂದು ಡ್ರಾಮ ಮಾಡುತ್ತಿದ್ದಾರೆ, ಇದನ್ನು ನಾನು ಖಂಡನೆ ಮಾಡುತ್ತಿದ್ದೇನೆ. ಇದು ಒಳ್ಳೆಯದಲ್ಲ.